## ರಾಣಿ ಮದುವೆಯ ಜೋಕುಗಳು!

ಇನ್ನೇನು ಕೆಲವೇ ದಿನಗಳಲ್ಲಿ ಹಸೆಮಣೆ ಏರಲಿದ್ದಾರೆ ಎಂದು ಕಾಯಿಸಿ ವರುಷಗಳನ್ನೇ ದೂಡಿದ್ದ ರಾಣಿ ಮುಖರ್ಜಿ ಮತ್ತು ಆದಿತ್ಯ ಚೋಪ್ರಾ ಜೋಡಿ ಕೊನೆಗೂ ವಿವಾಹ ಬಂಧನಕ್ಕೆ ಒಳಗಾಗಿದೆ. ಆದರೆ ಬಾಲಿವುಡ್ ಹಿತೈಷಿಗಳನ್ನೆಲ್ಲಾ ಒಂದುಗೂಡಿಸಿ ಧಾಂ ಧೂಂ ಎಂದು ಅದ್ದೂರಿಯಾಗಿ ಮದುವೆ ಆಗುತ್ತಾರೆ ಎಂಬ ಊಹೆಗಳೆಲ್ಲಾ ತಲೆಕೆಳಗಾಗಿದೆ. ಇಟಲಿಯಲ್ಲಿ ಗುಟ್ಟಾಗಿ ಮದುವೆ ಶಾಸ್ತ್ರ ಮುಗಿಸಿ ಎಲ್ಲರಿಗೂ ಸರ್‌ಪ್ರೈಸ್ ನೀಡಿದ್ದಾರೆ ಈ ನವದಂಪತಿ. ಹೀಗಾಗಿ ಸದ್ಯಕ್ಕೆ ಬಿ–ಟೌನಿನ ಗಲ್ಲಿಗಳಲ್ಲಿ ನಟ, ನಟಿಯರ ಗಾಸಿಪ್‌ಗಳಿಗಿಂತ ರಾಣಿ ಕಲ್ಯಾಣ ಕಥೆಯದೇ ಜೋರು ಸುದ್ದಿ. ಹೇಳದೆ ಕೇಳದೆ ಮದುವೆಯಾದದ್ದಕ್ಕೆ ಬೇಸರಗೊಂಡಿರುವ ರಾಣಿ ಅಭಿಮಾನಿಗಳೆಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ದುಃಖ ತೋಡಿಕೊಳ್ಳುತ್ತಿದ್ದರೆ, ಇದೇ ತಾಣಗಳು ರಾಣಿ ಮದುವೆ ಕುರಿತ ಜೋಕುಗಳ ಉಗಮ ಸ್ಥಾನವೂ ಆಗಿದೆ. ಇಬ್ಬರ ಜೋಡಿಯ ಕಥೆಗಳನ್ನು ಬಲ್ಲವರಿಗೆ ಈ ಜೋಕುಗಳ ಹಿಂದೆ ಅಡಗಿರುವ ಕುಹಕ ಅರ್ಥವಾಗಬಲ್ಲದು. ಈ ಮದುವೆ ಜೋಕುಗಳು ಆದಿತ್ಯರ ತಮ್ಮ ಉದಯ್ ಚೋಪ್ರಾ ಮೇಲೆ ಹೆಚ್ಚು ಹರಿದಾಡುತ್ತಿರುವುದು ವಿಶೇಷ. ಅವುಗಳ ಒಂದಷ್ಟು ತುಣುಕು ಇಲ್ಲಿವೆ:

- ★ ಸಾಮಾನ್ಯವಾಗಿ ಜನರು ಮದುವೆಯಾಗಿ ಮಧುಚಂದ್ರಕ್ಕೆ ಹೋಗುತ್ತಾರೆ. ಆದರೆ ಆದಿತ್ಯ ಚೋಪ್ರಾ ಮಧುಚಂದ್ರಕ್ಕೆ ಹೋಗಿ ಮದುವೆಯಾಗಿದ್ದಾರೆ.
- ★ ರಾಣಿ ಮತ್ತು ಆದಿತ್ಯ ಇಟಲಿಯಲ್ಲಿ ಮದುವೆಯಾದದ್ದು– ಇಟಲಿಯಿಂದ ಭಾರತಕ್ಕೆ ಬಂದಿರುವ ಮೊದಲ ಸಿಹಿ ಸುದ್ದಿ.
- ★ ಕೊನೆಗೂ ಇಬ್ಬರ ಮದುವೆಯಂತೂ ಆಯಿತು. ಈಗಿರುವ ಪ್ರಶ್ನೆಯೆಂದರೆ ಮದುಮಗ ಮದುವೆ ಆಲ್ಬಮ್‌ಗೆ ಪೋಸು ನೀಡಿದರಾ, ಇಲ್ಲವಾ ಎಂದು?
- ★ ಶುಭಾಶಯಗಳು ಉದಯ್ ಚೋಪ್ರಾ. ಮನೆಯಲ್ಲಿ ಇನ್ನು ಮುಂದಾದರೂ ನಿಮಗೆ ನಟನೆಯ ತರಬೇತಿ ಸಿಗಬಹುದು.
- ★ ಮ್ಯಾಟ್ರಿಮೊನಿಯಲ್ ತಾಣಗಳಲ್ಲಿ ಬಯೋಡೇಟಾ ಹಾಕಲು ಕೊನೆಗೂ ಉದಯ್ ಚೋಪ್ರಾಗೆ ದಾರಿ ಸುಗಮವಾಗಿದೆ.
- ★ ಭಾರತದಲ್ಲಿ ಈಗ ಮದುವೆ ಸೀಸನ್. ಎಲ್ಲಾ ಛತ್ರಗಳೂ ಬುಕ್ ಆಗಿದ್ದರಿಂದ ಅವರಿಬ್ಬರು ಇಟಲಿಗೆ ಹೋಗಬೇಕಾಯಿತು.







## ಅನುಷ್ಕಾ ಜಾಗಕ್ಕೆ ಇಲಿಯಾನಾ

ಅನುಷ್ಕಾ ಶರ್ಮಾ ಮತ್ತು ವಿರಾಟ್ ಕೊಹ್ಲಿ ಪ್ರೇಮ ಗೀತೆ ಗುಟ್ಟೇನೂ ಅಲ್ಲ. ಶಾಂಪೂ ಜಾಹೀರಾತಿನ ವೇಳೆ ತೆರೆ ಹಂಚಿಕೊಂಡ ಇಬ್ಬರೂ ಅದೆಷ್ಟೋ ರಾತ್ರಿಗಳಲ್ಲಿ ಕದ್ದುಮುಚ್ಚಿ ಸುತ್ತಾಡಿದ್ದಿದೆ. ಒಬ್ಬರಿಗಾಗಿ ಮತ್ತೊಬ್ಬರು ಸಮಯ ಹೊಂದಾಣಿಕೆ ಮಾಡಿಕೊಂಡು ಭೇಟಿ ಮಾಡಿದ್ದಿದೆ. ಆದರೆ ಈ ಬಾರಿ ಕೊಹ್ಲಿಗಾಗಿ ಸಮಯ ಕೊಡಲು ಅನುಷ್ಕಾಗೆ ಬಿಡುವೇ ಸಿಗುತ್ತಿಲ್ಲ. ಹೀಗಾಗಿ ಅನುಷ್ಕಾಳ ಜಾಗಕ್ಕೆ ಇಲಿಯಾನಾ ಡಿ ಕ್ರೂಜ್ ಬಂದಿದ್ದಾರೆ.

ಅಂದ ಹಾಗೆ, ಈ ಬದಲಾವಣೆ ವಿರಾಟ್ ಪ್ರೇಮ ಪ್ರಸಂಗದಲ್ಲಲ್ಲ, ಬದಲಾಗಿ ಉತ್ಪನ್ನವೊಂದರ ಪ್ರಚಾರ ರಾಯಭಾರಿಯ ಜಾಗಕ್ಕೆ. ಅನುಷ್ಕಾ ತಮ್ಮ ಚೊಚ್ಚಲ ನಿರ್ಮಾಣದ 'ಎನ್‌ಎಚ್10' ಚಿತ್ರದಲ್ಲಿ ಬಿಜಿ. ವಿರಾಟ್ ಜೊತೆ ಜಾಹೀರಾತಿನ ಚಿತ್ರೀಕರಣದಲ್ಲಿ ತೊಡಗಬೇಕಿದ್ದ ಅನುಷ್ಕಾ ಜಾಗಕ್ಕೆ ಆ ಕಂಪೆನಿ ಇಲಿಯಾನಾರನ್ನು ಕರೆತಂದಿದೆ. ಎಷ್ಟೇ ಪ್ರಯತ್ನ ಪಟ್ಟರೂ ಮೊದಲೇ ಒಪ್ಪಿಕೊಂಡಿದ್ದ ದಿನಾಂಕಗಳನ್ನು ಬದಲಿಸಿ ವಿರಾಟ್ ಜೊತೆಗಿನ ಜಾಹೀರಾತಿನಲ್ಲಿ ನಟಿಸಲು ಅನುಷ್ಕಾರಿಗೆ ಸಾಧ್ಯವಾಗಲೇ ಇಲ್ಲ. ಇದು ಅವರಿಗೆ ತೀವ್ರ ನಿರಾಸೆ ಉಂಟು ಮಾಡಿದೆಯಂತೆ. ಈ ಇಬ್ಬರನ್ನೂ ಹೊಸ ಜಾಹೀರಾತಿನಲ್ಲಿ ಒಟ್ಟಿಗೆ ನೋಡುವ ಅಭಿಮಾನಿಗಳ ಆಸೆಗೆ ತಣ್ಣೀರು ಎರಚಿದಂತಾಗಿದೆ. ಅನುಷ್ಕಾ ಶೂಟಿಂಗ್ ನೆಪದಲ್ಲಿ ಕೊಹ್ಲಿ ಜೊತೆ ಸುತ್ತುವ ಅವಕಾಶ ಕೈ ತಪ್ಪಿದ್ದಕ್ಕೆ ಬೇಸರ ಪಟ್ಟುಕೊಳ್ಳುತ್ತಿರಬಹುದು. ಆದರೆ ಕೊಹ್ಲಿ ಮಾತ್ರ ಹೊಸ ಹುಡುಗಿ ಜೊತೆ ರೊಮ್ಯಾನ್ಸ್ ಮಾಡುವ ಅವಕಾಶ ಸಿಗುತ್ತಿದೆ ಎಂದು ರೋಮಾಂಚಿತರಾಗಿದ್ದಾರಂತೆ!

■ ಅಮಿ